1	2	3	4	5
2005–06	254	563	0 ರಿಂದ 60 ರೂ. 240/– 60 ರಿಂದ 90, ರೂ. 255/– 90 ರಿಂದ 120, ರೂ. 270/– 120 ರಿಂದ ಮೇಲ್ಪಟ್ಟು ರೂ. 280.	150 ಎಂ.ಎಂ.ಗೆ ರೂ. 558/– 175 ಎಂ.ಎಂ.ಗೆ 698/–

566 (687) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಜನ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಆಸ್ಪತ್ರೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಸ್ವಂತ ಕಟ್ಟಡವಿಲ್ಲದ ಆಸ್ಪತ್ರೆಗಳು ಎಷ್ಟು;

ಈ) ಸರ್ಕಾರಿ ವಿವಿಧ ಆಸ್ಪತ್ರೆಗಳಲ್ಲಿರುವ ಒಟ್ಟು ಹಾಸಿಗೆ ಸೌಲಭ್ಯ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಉ) ಸರ್ಕಾರಿ ಆಸ್ಪತ್ರೆಗಳ ಹಾಸಿಗೆ ಸೌಲಭ್ಯ ಗಮನಿಸಿದಾಗ ಜಿಲ್ಲಾವಾರು ತಾರತಮ್ಯ ವಾಗಿದೆಯೇ; ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ;

ಊ) ಡಾ: ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಆರೋಗ್ಯ ಸೇವೆ ಉತ್ತಮಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಕೊಳ್ಳಲಿದೆ;

ಋ) ಆರ್ಥಿಕವಾಗಿ ಹಿಂದುಳಿದ ವರ್ಗದ ಜನರ ಆರೋಗ್ಯ ರಕ್ಷಣೆಗಾಗಿ ಸರ್ಕಾರಿ ಆಸ್ಪತ್ರೆಗಳನ್ನು ಹಿಂದುಳಿದ ಪ್ರದೇಶದಲ್ಲಿ ಆದ್ಯತೆ ಮೇಲೆ ತೆರೆಯಲಾಗುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 2001ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆ 52850562 ಇರುತ್ತದೆ. ಇದರಲ್ಲಿ ನಗರ ಜನಸಂಖ್ಯೆ 17961529 ಹಾಗೂ ಗ್ರಾಮೀಣ ಜನಸಂಖ್ಯೆ 34889033. (ಜಿಲ್ಲಾವಾರು ವಿವರಗಳನ್ನು ಅನುಬಂಧ–Iರಲ್ಲಿ ಕೊಡಲಾಗಿದೆ).

ಆ) ರಾಜ್ಯದಲ್ಲಿ ಈ ಕೆಳಕಂಡಂತೆ ಸರ್ಕಾರಿ ಆಸ್ಪತ್ರೆಗಳು ಇರುತ್ತವೆ.

24 ಜಿಲ್ಲಾ ಆಸ್ಪತ್ರೆ

42 ಸಾರ್ವಜನಿಕ ಆಸ್ಪತ್ರೆ

301 ಸಮುದಾಯ ಆರೋಗ್ಯ ಕೇಂದ್ರಗಳು

1679 ಪ್ರಾಥಮಿಕ ಆರೋಗ್ಯ ಕೇಂದ್ರ

578 ಪ್ರಾಥಮಿಕ ಆರೋಗ್ಯ ಘಟಕ

8143 ಉಪಕೇಂದ್ರಗಳು.

(ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಕೊಡಲಾಗಿದೆ)

ಇ) 43 ಸಮುದಾಯ ಆರೋಗ್ಯ ಕೇಂದ್ರಗಳು, 79 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 3586 ಉಪ ಕೇಂದ್ರಗಳಿಗೆ ಕಟ್ಟಡಗಳು ಇರುವುದಿಲ್ಲ.

ಈ) ಸರ್ಕಾರಿ ವಿವಿಧ ಆಸ್ಪತ್ರೆಗಳಲ್ಲಿರುವ ಒಟ್ಟು ಹಾಸಿಗೆಗಳು 47217. (ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ಕೊಡಲಾಗಿದೆ).

ಉ) ಇಲ್ಲ.

ಊ) ಹಿಂದುಳಿದ 39 ತಾಲ್ಲೂಕುಗಳಲ್ಲಿಯ 45 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು ಕಟ್ಟಡ ಕಾಮಗಾರಿಯನ್ನು ಸಹ ಕೈಗೆತ್ತಿಕೊಳ್ಳಲಾಗುತ್ತಿದೆ. ಇದೇ 39 ತಾಲ್ಲೂಕುಗಳಲ್ಲಿಯ ಎಲ್ಲಾ 399 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24 ಗಂಟೆಗಳ ನರ್ಸಿಂಗ್ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಈ 39 ತಾಲ್ಲೂಕು ಆಸ್ಪತ್ರೆಗಳ ಪೈಕಿ 36 ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಇದರಲ್ಲಿ 29 ತಾಲ್ಲೂಕು ಆಸ್ಪತ್ರೆಗಳನ್ನು 50 ಹಾಸಿಗೆಗಳಿಂದ 100 ಹಾಸಿಗೆಗಳಿಗೆ ಹಾಗೂ 7 ತಾಲ್ಲೂಕು ಆಸ್ಪತ್ರೆಗಳನ್ನು 30 ಹಾಸಿಗೆಗಳಿಂದ 50 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗಿದೆ. ಇದಕ್ಕೂ ಮೊದಲು ಗಂಗಾವತಿ ಹಾಗೂ ಭಾಲ್ಕಿ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಕೊಪ್ಪಳ ಜಿಲ್ಲಾ ಆಸ್ಪತ್ರೆಯನ್ನು ಹೊಸದಾಗಿ ಕಟ್ಟುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಋ) ಆರ್ಥಿಕವಾಗಿ ಹಿಂದುಳಿದ ವರ್ಗದ ಜನರ ಆರೋಗ್ಯ ರಕ್ಷಣೆಗಾಗಿ ಈಗಾಗಲೇ ಹಿಂದುಳಿದ ಪ್ರದೇಶದಲ್ಲಿಯೂ ಸರ್ಕಾರಿ ಆಸ್ಪತ್ರೆಗಳಿದ್ದು, ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ.

ವಿಧಾನ ಸಭೆಯ ಪ್ರಶ್ನೆ ಸಂಖ್ಯೆ: 687ಕ್ಕೆ ಉತ್ತರಿಸಬೇಕಾದ ದಿನಾಂಕ: 29-06-2006

ಅನುಬಂಧ-1

2001 ಜನಸಂಖ್ಯಾ ಪರಿವೀಕ್ಷಣೆ

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು	ಗ್ರಾಮಾಂತರ	ನಗರ
1.	ಬೆಂಗಳೂರು (ನಗರ)	6537124	777137	5759987
2.	ಬೆಂಗಳೂರು (ಗ್ರಾಮಾಂತರ)	1881514	1474118	407396

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು	ಗ್ರಾಮಾಂತರ	ನಗರ
3.	ಚಿತ್ರದುರ್ಗ	1517896	1243658	274238
4.	ದಾವಣಗೆರೆ	1790952	1247954	542998
5.	ಕೋಲಾರ	2536069	1910546	625523
6.	ಶಿವಮೊಗ್ಗ	1642545	1071535	571010
7.	ತುಮಕೂರು	2584711	2077509	507202
8.	ಬಾಗಲಕೋಟೆ	1651892	1173372	478520
9.	ಬೆಳಗಾಂ	4214505	3201814	1012691
10.	ಬಿಜಾಪುರ	1806918	1410829	396089
11.	ಧಾರವಾಡ	1604253	722336	881917
12.	ಗದಗ	971835	629652	342183
13.	ಹಾವೇರಿ	1439116	1140096	299020
14.	ಉತ್ತರ ಕನ್ನಡ	1353644	965731	387913
15.	ಬಳ್ಳಾರಿ	2027140	1320290	706850
16.	ಬೀದರ್	1502373	1157498	344875
17.	ಗುಲ್ಬರ್ಗಾ	3130922	2278301	852621
18.	ಕೊಪ್ಪಳ	1196089	997797	198292
19.	ರಾಯಚೂರು	1669762	1248925	420837
20.	ಚಾಮರಾಜನಗರ	965462	817372	148090
21.	ಚಿಕ್ಕಮಗಳೂರು	1140905	918181	222724
22.	ದಕ್ಷಿಣ ಕನ್ನಡ	1897730	1168428	729302
23.	ಹಾಸನ	1721669	1416996	304673
24.	ಕೊಡಗು	548561	473179	75382
25.	ಮಂಡ್ಯ	1763705	1480990	282715
26.	ಮೈಸೂರು	2641027	1658899	982128
27.	ಉಡುಪಿ	1112243	905890	206353
	ಒಟ್ಟು	**52850562**	**34889033**	**17961529**

ವಿಧಾನ ಸಭೆಯ ಪ್ರಶ್ನೆ ಸಂಖ್ಯೆ: 687ಕ್ಕೆ ಉತ್ತರಿಸಬೇಕಾದ ದಿನಾಂಕ: 29-06-2006

ಅನುಬಂಧ-2

2001 ಜನಸಂಖ್ಯಾ ಪರಿವೀಕ್ಷಣೆ

ಕ್ರಮ ಸಂಖ್ಯೆ	ಜಿಲ್ಲೆ	ಸಾರ್ವಜನಿಕ ಆಸ್ಪತ್ರೆ	ಜಿಲ್ಲಾ ಆಸ್ಪತ್ರೆ	ಸಮುದಾಯ ಆರೋಗ್ಯ ಕೇಂದ್ರ	ಪ್ರಾಥಮಿಕ ಆರೋಗ್ಯ ಕೇಂದ್ರ	ಪ್ರಾಥಮಿಕ ಆರೋಗ್ಯ ಘಟಕ	ಉಪ ವಿಭಾಗ	ಒಟ್ಟು ಹಾಸಿಗೆಗಳು
1	2	3	4	5	6	7	8	9
1.	ಬೆಂಗಳೂರು (ನಗರ)	12	0	3	31	42	185	4928
2.	ಬೆಂಗಳೂರು (ಗ್ರಾ)	0	0	11	73	29	432	1143
3.	ಚಿತ್ರದುರ್ಗ	0	1	13	57	32	273	1414
4.	ದಾವಣಗೆರೆ	3	1	8	70	33	291	1912
5.	ಕೋಲಾರ	4	1	14	82	37	385	2354
6.	ಶಿವಮೊಗ್ಗ	1	1	9	56	37	307	1709
7.	ತುಮಕೂರು	0	1	13	98	39	477	2022
8.	ಬಾಗಲಕೋಟೆ	0	1	12	46	2	224	908
9.	ಬೆಳಗಾಂ	0	1	24	135	13	539	2636
10.	ಬಿಜಾಪುರ	0	1	12	63	2	285	1404
11.	ಧಾರವಾಡ	1	1	3	28	3	179	1712
12.	ಗದಗ	3	1	6	29	6	174	568
13.	ಹಾವೇರಿ	2	1	11	50	23	290	851
14.	ಉತ್ತರ ಕನ್ನಡ	0	1	13	61	19	120	1480
15.	ಬಳ್ಳಾರಿ	0	1	13	53	17	272	2204
16.	ಬೀದರ್	1	1	10	41	13	234	1320
17.	ಗುಲ್ಬರ್ಗಾ	5	1	29	108	21	378	2760
18.	ಕೊಪ್ಪಳ	0	1	11	43	2	183	796
19.	ರಾಯಚೂರು	0	1	9	47	6	196	1266
20.	ಚಾಮರಾಜನಗರ	0	1	5	51	7	246	862
21.	ಚಿಕ್ಕಮಗಳೂರು	1	1	9	51	40	334	1382
22.	ದಕ್ಷಿಣ ಕನ್ನಡ	2	1	7	65	4	431	1787

1 2	3	4	5	6	7	8	9
23. ಹಾಸನ	0	1	16	83	52	420	2062
24. ಕೊಡಗು	1	1	8	29	4	188	1317
25. ಮಂಡ್ಯ	1	1	9	71	37	375	1834
26. ಮೈಸೂರು	4	0	16	96	47	432	3593
27. ಉಡುಪಿ	1	1	7	62	11	293	993
ಒಟ್ಟು	**42**	**24**	**301**	**1679**	**578**	**8143**	**47217**

567 (616) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಆಯುರ್ವೇದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿದ್ದು ಅದೇ ರೀತಿ ಎಂಬಿಬಿಎಸ್ ವೈದ್ಯರನ್ನು ಕೂಡಲೇ ನೇಮಕಾತಿ ಮಾಡಲಾಗುವುದೇ;

ಆ) ಸದರಿ ಇಲಾಖೆಯಲ್ಲಿಯೇ ಖಾಲಿ ಇರುವ ಇತರೆ ಸಿಬ್ಬಂದಿಗಳನ್ನು ಯಾವಾಗ ಭರ್ತಿ ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು. 500 ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರಡು ಅಧಿಸೂಚನೆ ಹೊರಡಿಸಲಾಗಿದೆ. ಮೊದಲನೇ ಹಂತದಲ್ಲಿ 250 ವೈದ್ಯರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿ ನೇರ ನೇಮಕಾತಿಯನ್ನು ಶೀಘ್ರ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಶುಶ್ರೂಷಕ ಹುದ್ದೆಗಳು 400, ಕಿರಿಯ ಆರೋಗ್ಯ ಸಹಾಯಕ (ಪುರುಷ) 329, ಕಿರಿಯ ಪ್ರಯೋಗಶಾಲಾ ತಂತ್ರಜ್ಞ 532, ಕ್ಷ-ಕಿರಣ ತಂತ್ರಜ್ಞರು 56, ಫಾರ್ಮಾಸಿಸ್ಟ್ 400, ನೇತ್ರ ಸಹಾಯಕರು 90, ಕಿರಿಯ ಆರೋಗ್ಯ ಸಹಾಯಕರು (ಮಹಿಳೆ) 1000, ನೇಮಕ ಮಾಡಿಕೊಳ್ಳುವ ಬಗ್ಗೆ ಅಧಿಸೂಚನೆ ಸಂಖ್ಯೆ: ಆಕುಕ 862 ಹೆಚ್ಎಸ್ಹೆಚ್ 2004 ದಿನಾಂಕ: 15-5-2005 ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆಯ ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು. ಬಡ್ತಿ ಮೂಲಕ ತುಂಬಬಹುದಾದ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ

568 (681) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿ ಪ್ರಾಥಮಿಕ ಆರೋಗ್ಯ ಘಟಕ / ಕೇಂದ್ರಗಳ ಸಂಖ್ಯೆ ಎಷ್ಟು;